ದಿನಾಂಕ 21-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎ.ಪಿ ವಕೀಲರಿಂದ.**

ದಾವಾ ಆಸ್ತಿಯ ವಿಸ್ತೀರ್ಣ 12 ಎಕರೆ ಇರುತ್ತದೆ. ದಾವಾ ಆಸ್ತಿ ಎರಡು ಪಟ್ಟಿಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪಟ್ಟಿಯ ವಿಸ್ತೀರ್ಣ ನೆನಪಿಲ್ಲ. 2 ನೇ ದಾವಾ ಆಸ್ತಿಯನ್ನು ಸಿದ್ರಾಮಪ್ಪ ರವರು 1953 ರಲ್ಲಿ ನನ್ನ ಹೆಸರಿಗೆ ಮಾಡಿಸಿರುತ್ತಾರೆ. ಈ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಿದ್ರಾಮಪ್ಪ ರವರ ಮಗ 2 ನೇ ಪ್ರತಿವಾದಿ ಆಗಿರುತ್ತಾರೆ. ಸಿದ್ರಾಮಪ್ಪ ರವರು ತೀರಿಕೊಂಡ ನಂತರ ಅವರ ಆಸ್ತಿಗಳು ಅವರ ವಾರಸುದಾರರಿಗೆ ಹೋಗುತ್ತವೆ ಎಂದರೆ ಸಿದ್ರಾಮಪ್ಪ ರವರು ಜೀವಂತ ಇದ್ದಾಗಲೇ 2 ನೇ ದಾವಾ ಆಸ್ತಿ ನನ್ನ ಹೆಸರಿಗೆ ಆಗಿತ್ತು ಎಂದು ಹೇಳುತ್ತಾರೆ. 2 ನೇ ದಾವಾ ಆಸ್ತಿಯಲ್ಲಿ ನಾನು ಸಾಗುವಳಿ ಮಾಡಿರುತ್ತೇನೆ. 2 ನೇ ದಾವಾ ಆಸ್ತಿಯಲ್ಲಿ ನಾನು ಸಾಗುವಳಿ ಮಾಡುವುದನ್ನು ಬಿಟ್ಟು ಸುಮಾರು 30 ವರ್ಷ ಆಗಿರುತ್ತದೆ. ಈ 30 ವರ್ಷಗಳಲ್ಲಿ ದಾವಾ ಆಸ್ತಿಗಳಲ್ಲಿ ಸಾಗುವಳಿಯನ್ನು 2 ನೇ ಪ್ರತಿವಾದಿ ಮಾಡುತ್ತಿರುತ್ತಾರೆ, ಅವರ ಮೊದಲು ಅವರ ತಂದೆ ಮಾಡುತ್ತಿದ್ದು 2 ನೇ ಪ್ರತಿವಾದಿಗೆ ನಾವು 2 ನೇ ದಾವಾ ಆಸ್ತಿಯನ್ನು ಲೀಜ್ ಮೇಲೆ ಸಾಗುವಳಿ ಮಾಡಲು ಕೊಟ್ಟಿದ್ದೆವು ಎಂದು ಹೇಳುತ್ತಾರೆ. 2 ನೇ ದಾವಾ ಆಸ್ತಿ 2 ನೇ ಪ್ರತಿವಾದಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ 04 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ 3 ನೇ ಪ್ರತಿವಾದಿ 11 ಇ ನಕಾಶೆಯನ್ನು ತಯಾರಿಸಿ ತಾವು ಖರೀದಿ ಮಾಡಿದ ಜಮೀನನ್ನು ಸರ್ವೆ ಸಹ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ 3 ನೇ ಪ್ರತಿವಾದಿ ಸುತ್ತಮುತ್ತಲಿನ ಜಮೀನಿನವರಿಗೆ ನೋಟಿಸಗಳನ್ನು ಕೊಟ್ಟಿದ್ದು ಆದರೆ ಸುತ್ತಮುತ್ತಲಿನವರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. 11 ಇ ನಕಾಶೆ ಮಾಡಲು ನಾನು ತಕರಾರು ಸಲ್ಲಿಸಿಲ್ಲ ಕಾರಣ ನನಗೆ ಆ ಬಗ್ಗೆ ಗೊತ್ತಿರಲಿಲ್ಲ. ಆದಕಾರಣ 3 ನೇ ಪ್ರತಿವಾದಿ 2 ನೇ ಪ್ರತಿವಾದಿಯಿಂದ 04 ಗುಂಟೆ ಜಮೀನಿಗೆ ನೋಂದಾಯಿತ ಖರೀದಿ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ ಖರೀದಿ ನೋಂದಣಿ ಪತ್ರ ಸಂಖ್ಯೆ 5792/2019-20 ದಿನಾಂಕ 07-03-2020 ರಂದು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಕ್ರಯ ಪತ್ರಕ್ಕೆ 2 ನೇ ಪ್ರತಿವಾದಿಯ ಮಗ ಬಸವರಾಜ ಮಾಲೀಪಾಟೀಲ್ ರವರು ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಮಾಡಿರಬಹುದು ನನಗೆ ಗೊತ್ತಿಲ್ಲ. 2 ನೇ ದಾವಾ ಆಸ್ತಿಗೆ ಸಂಬಂಧಿಸಿದಂತೆ 2020 ರ ಮೊದಲು ನನ್ನ ಹೆಸರಿಗೆ ಯಾವುದೇ ಪಹಣಿ ಇರಲಿಲ್ಲ ಎಂದರೆ ನನ್ನ ಹೆಸರಿಗೆ ಪಹಣಿಗಳು ಇದ್ದವು ಆದರೆ 2 ನೇ ಪ್ರತಿವಾದಿ ನನ್ನ ಹೆಸರಿನಲ್ಲಿದ್ದ ಪಹಣಿಗಳನ್ನು ತಿದ್ದಿಸಿರುತ್ತಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಪಹಣಿಗಳನ್ನು ತಿದ್ದಿಸಿರುತ್ತಾರೆ ಎಂದು ನಾನು ತಹಸೀಲ್ದಾರ ಕಚೇರಿಯಲ್ಲಿ ತಕರಾರನ್ನು ಸಲ್ಲಿಸಿರುವುದಿಲ್ಲ. 04 ಗುಂಟೆ ಜಮೀನನ್ನು ಖರೀದಿ

ಮಾಡಿದಾಗಿನಿಂದ 3 ನೇ ಪ್ರತಿವಾದಿಯೇ ಸದರಿ ಜಮೀನಿಗೆ ಮಾಲೀಕರು ಹಾಗೂ ಕಬ್ಜೆದಾರರು ಎಂದರೆ ಗೊತ್ತಿಲ್ಲ. ಕ್ರಯಪತ್ರ ಆದ ನಂತರ 3 ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ನಂಬರ ಹೆಚ್ 33/2019-20 ರಂತೆ ಮುಟೇಶನ್ ಆಗಿರುತ್ತದೆ ಎಂದರೆ ಗೊತ್ತಿಲ್ಲ. 04 ಗುಂಟೆ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ 3 ನೇ ಪ್ರತಿವಾದಿ ಆ ಜಮೀನಿಗೆ ಸಂಬಂಧಿಸಿದಂತೆ ಋಣಭಾರ ಪತ್ರವನ್ನು ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. 04 ಗುಂಟೆ ಜಮೀನು ರಾಮದುರ್ಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವುದರಿಂದ 3 ನೇ ಪ್ರತಿವಾದಿ ಪಂಚಾಯತಿಯಿಂದ ಕಟ್ಟಡ ಪರವಾನಿಗೆ ಪಡೆದು 04 ಗುಂಟೆ ಜಮೀನಿನಲ್ಲಿ ಮನೆ ಕಟ್ಟಿ ಅದರಲ್ಲಿಯೇ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 04 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಖರೀದಿ ಮಾಡಿ ಅವರೇ ಮಾಲೀಕರು ಹಾಗೂ ಕಬ್ಜೆದಾರರು ಇದ್ದು ನಾನು ಅಥವಾ 2 ನೇ ಪ್ರತಿವಾದಿ 04 ಗುಂಟೆ ಜಮೀನಿಗೆ ಸಂಬಂಧ ಇರುವುದಿಲ್ಲ ಎಂದರೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.